ದಿನಾಂಕ 19-02-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎ.ಟಿ.ಬಿ ವಕೀಲರಿಂದ.**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತಿರುತ್ತವೆ. ಓ.ಎಸ್ 81/2022 ನ್ನು ಉಮಾಪತಿ ವಿರುದ್ಧ ಸಲ್ಲಿಸಿರುತ್ತೇನೆ. ಉಮಾಪತಿಯವರು ಹಣ ನೀಡಬೇಕು ಎಂದು ದಾವೆ ಸಲ್ಲಿಸಿದ್ದೆ. ನಾನು ಅರಕೇರಾ ಗ್ರಾಮದಲ್ಲಿ ಇರುತ್ತೇನೆ ಎಂದರೆ ಸರಿ. ವಿಶ್ವನಾಥ ಸಹ ಅರಕೇರಾ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿ. ದಾವೆ ಸಲ್ಲಿಸುವ ಪೂರ್ವದಲ್ಲಿ ಅರ್ಜಿದಾರ ಉಮಾಪತಿಗೆ ನೋಟಿಸ ಕಳುಹಿಸಿರುತ್ತೇನೆ. ಸದರಿ ನೋಟಿಸ ಕಳುಹಿಸಿದ ದಿನಾಂಕ, ತಿಂಗಳು ಹೇಳಲು ನೆನಪಿರುವುದಿಲ್ಲ. ಸದರಿ ನೋಟಿಸ ಮುಟ್ಟಿರುತ್ತದೆಯೇ ಎಂಬ ಪ್ರಶ್ನೆಗೆ ಮುಟ್ಟಿರುತ್ತದೆ ಅದನ್ನು ತಿರಸ್ಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕಳುಹಿಸಿದ ನೋಟಿಸ ಮುಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನೋಟಿಸ ಮುಟ್ಟದೇ ಇದ್ದುದ್ದರಿಂದ ಉತ್ತರ ನೀಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಸ್ಟಮನ್ ನನಗೆ ನೋಟಿಸನ್ನು ತೆಗೆದುಕೊಂಡಿರುವುದಿಲ್ಲ ಎಂದು ಹೇಳಿರುತ್ತಾರೆ.

ದಾವೆ ಸಲ್ಲಿಸಿದ ನಂತರ ನ್ಯಾಯಾಲಯದ ದಾವಾ ಸಮನ್ಸ ಪ್ರತಿವಾದಿಗೆ ಮುಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವೆ ಸಲ್ಲಿಸಿದ ವಿಚಾರ ಪ್ರತಿವಾದಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಪೋಸ್ಟಮನ್ ಬಸವರಾಜ ಅರಕೇರಾ ಗ್ರಾಮದವರಾಗಿದ್ದು ಮೊದಲಿನಿಂದಲೂ ಪರಿಚಯವಿರುತ್ತಾರೆ. ಉಮಾಪತಿಗೆ ನೋಟಿಸ ಮುಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಿರುವ ವಿಚಾರ ಪ್ರತಿವಾದಿಗೆ ಗೊತ್ತಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಚೆ ಇಲಾಖೆಯ ಪೋಸ್ಟಮನ್‌ನೊಂದಿಗೆ ಶಾಮೀಲಾಗಿ ಪ್ರತಿವಾದಿಗೆ ನೋಟಿಸ ಜಾರಿ ಮಾಡದೇ ಸುಳ್ಳಾಗಿ ತಿರಸ್ಕರಿಸಿರುತ್ತಾನೆ ಎಂದು ನಮೂದು ಮಾಡಿ ಕಳುಹಿಸುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.